Dt 06.01.2024.

OS 07/2021 PW.3

(ದಿ:**06.01.2024** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಿಡಬ್ಲ್ಯೂ-3 ರವರ ಮುಖ್ಯ ವಿಚಾರಣೆ ವಾದಿ ಪರ ವಕೀಲರಿಂದ**

ನಾನು ಈ ಪ್ರಕರಣದಲ್ಲಿ ಸಾಕ್ಷಿದಾರನಾಗಿದ್ದು, ಈ ದಿನ ನನ್ನ ಮುಖ್ಯ ವಿಚಾರಣೆಯ ಹೇಳಿಕೆಯನ್ನು ಪ್ರಮಾಣ ಪತ್ರ ರೂಪದಲ್ಲಿ ಹಾಜರುಪಡಿಸಿದ್ದೇನೆ. ಅದರಲ್ಲಿ ಹೇಳಿರುವ ಸಂಗತಿಗಳೆಲ್ಲವೂ ಸತ್ಯ ಮತ್ತು ಅದನ್ನು ನಾನೇ ನಮ್ಮ ವಕೀಲರಿಗೆ ಹೇಳಿ ಬರೆಸಿ, ಸಹಿ ಮಾಡಿರುತ್ತೇನೆ.

**ಪಾಟೀ ಸವಾಲು ಪ್ರತಿವಾದಿ ಪರ ವಕೀಲರಿಂದ**

**1.** ನಾನು ಮಲ್ಲಾಡಿಹಳ್ಳಿ ಗ್ರಾಮದಲ್ಲಿ ಸುಮಾರು **40** ವರ್ಷಗಳಿಂದ ವಾಸವಾಗಿರುತ್ತೇನೆ. ವಾದಿ ನನ್ನ ಸಂಬಂಧಿಕರು ಎಂದರೆ ಸರಿಯಲ್ಲ. ವಾದಿ ಓಂಕಾರಂಬಪ್ಪ ರವರ ಮನೆ ನಮ್ಮ ಮನೆಯ ಹತ್ತಿರ ಇರುತ್ತದೆ ಎಂದರೆ ಸರಿ. ವಾದಿ ಮತ್ತು ನನ್ನ ಮನೆ ಅಕ್ಕ-ಪಕ್ಕ ಇರುವುದರಿಂದ ನಾನು ಮತು ವಾದಿ ವಿಶ್ವಾಸದಿಂದ ಇದ್ದೇವೆ ಎಂದರೆ ಸರಿ, ಸಾಕ್ಷಿ ಮುಂದುವರಿದು **2019** ರಲ್ಲಿ ವಾದಿ ದಾವಣಗೆರೆಯಿಂದ ವಾರದಲ್ಲಿ ಎರಡು-ಮೂರು ದಿನ ನಮ್ಮ ಊರಿಗೆ ಬಂದು ಹೋಗುತ್ತಿದ್ದರು ಎಂದು ನುಡಿದಿರುತ್ತಾರೆ.

**2.** ದಾವಾ ಮನೆಯಲ್ಲಿ ಪ್ರತಿವಾದಿಗಳು ಈಗ ವಾಸವಾಗಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ದಾವಾ ಆಸ್ತಿಯಲ್ಲಿ **2019** ರಿಂದ ಸೆಪ್ಟೆಂಬರ್ **2020** ರವರೆಗೆ ವಾದಿಗಳು ವಾಸವಾಗಿದ್ದರು. ಪ್ರತಿವಾದಿಗಳು ದಾವಾ ಆಸ್ತಿಯಲ್ಲಿ ಸುಮಾರು **20** ವರ್ಷಗಳಿಂದ ಇಲ್ಲಿಯವರೆಗೆ ವಾಸವಾಗಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿ ವಾದಿಗೆ ಪಾಲು ವಿಭಾಗದಲ್ಲಿ ಬಂದಿರುವ ಬಗ್ಗೆ ನಾನು ಓದಿ ತಿಳಿದುಕೊಂಡಿರುತ್ತೇನೆ.

**3.** ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಪ್ರತಿವಾದಿಗಳು ದಾವಾ ಆಸ್ತಿಯಲ್ಲಿ ದಿ:**10.03.2019** ರಂದು ನನ್ನ ಹಾಗೂ ವಾದಿ ಮತ್ತು ನಮ್ಮ ಊರಿನ ಗ್ರಾಮಸ್ಥರಾದ ಶಂಕರಪ್ಪ, ರಂಗಪ್ಪ, ನಾಗರಾಜ್, ಚೆನ್ನಕೇಶವಪ್ಪ, ರಂಗಪ್ಪ ಮತ್ತು ಗೋಪಾಲಪ್ಪ ಇವರ ಸಮಕ್ಷಮ ಒಪ್ಪಿಗೆ ಪತ್ರ ಬರೆದುಕೊಟ್ಟು ವಾಸವಾಗಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**4.** ದಾವಾ ಆಸ್ತಿಯನ್ನು ವಾದಿಗಳು ಪ್ರತಿವಾದಿಗಳಿಗೆ ಬಿಟ್ಟು ಕೊಟ್ಟ ನಂತರ ಪ್ರತಿವಾದಿಗಳು ವಾದಿಗೆ ವಾಪಸ್ಸು ಬಿಟ್ಟುಕೊಡದ ಕಾರಣ ವಾದಿಗಳು ಪ್ರತಿವಾದಿಗಳನ್ನು ದಾವಾ ಆಸ್ತಿಯನ್ನು ಬಿಟ್ಟುಕೊಡುವಂತೆ ನನ್ನ ಮುಂದೆ ಕೇಳಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

Dt 06.01.2024.

**5**. ನಾನು ಮಲ್ಲಾಡಿಹಳ್ಳಿ ಗ್ರಾಮ ಪಂಚಾಯಿತಿಯ ಸದಸ್ಯರಾಗಿದ್ದರು ಎಂದರೆ ಸರಿ. ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ವಾದಿ ನನಗೆ ಸಪೋರ್ಟ್ ಮಾಡಿದ್ದರು ಎಂದರೆ ಸರಿಯಲ್ಲ. **1** ನೇ ಪ್ರತಿವಾದಿಯ ಮಗ **2** ನೇ ಪ್ರತಿವಾದಿ ಸದರಿ ಚುನಾವಣೆಯಲ್ಲಿ ನನ್ನ ವಿರುದ್ಧ ಕೆಲಸ ಮಾಡಿರುತ್ತಾರೆ ಎಂದರೆ ಸರಿಯಲ್ಲ. **1** ನೇ ಪ್ರತಿವಾದಿಯ ಮಗ **2** ನೇ ಪ್ರತಿವಾದಿ ನನ್ನ ವಿರುದ್ಧ ಸದರಿ ಚುನಾವಣೆಯಲ್ಲಿ ಕೆಲಸ ಮಾಡಿದ್ದರಿಂದ ಪ್ರತಿವಾದಿಗಳಿಗೆ ತೊಂದರೆ ಕೊಡುವ ಸಲುವಾಗಿ ವಾದಿಯ ಮಾತು ಕೇಳಿ ಸುಳ್ಳು ಪ್ರಮಾಣಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತಿತದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಬರೆದಿರುವ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು,
ಹೊಳಲ್ಕೆರೆ.